ಜನರ ನಡುವೆ ಕಳೆದು ಹೋಗಿಬಿಟ್ಟಾನೆಂದು ಅರುಂಧತಿಯೂ ಅವನ ಹಿಂದೆ ಓಡಿದಳು. ಜಯಂಟ್ ವೀಲಿನಲ್ಲಿ ಕೂರಲು ಟಿಕೆಟ್ ಕೊಳ್ಳಲು ಸಂಜೀವ್ ಕ್ಯೂನಲ್ಲಿ ನಿಂತಾಗ ನಾನು ಅಲ್ಲೇ ಒಂದು ಸುತ್ತು ಹೊಡೆದು ಮತ್ತೆ ಸಿಗುವೆನೆಂದು ಹೇಳಿ ಅವನನ್ನು ಬೀಳ್ಕೊಟ್ಟೆ. ಹಾರ್ಬರ್ ಎದುರು ಸ್ಪಾನಿಷ್ ಹುಡುಗರು ಗುಂಪು ಕಟ್ಟಿ ಟ್ಯಾಪ್ ಡಾನ್ಸ್ ಮಾಡುತ್ತಿದ್ದರು. ಪರಿಚಯದ ಮುಖವೊಂದಕ್ಕೆ ಹಂಬಲಿಸುತ್ತಿದ್ದ ಕ್ಷಣದಲ್ಲಿ ಕಂಡೇಬಿಟ್ಟಿತು ಆ ಮುಖ. ಸಾರಾ ಕೆಲಸ ಮಾಡುತ್ತಿದ್ದ ಕಾಫಿ ಶಾಪಿನಲ್ಲೇ ಕೆಲಸ ಮಾಡುತ್ತಿದ್ದವಳ ಮುಖ. ನಡುವಯಸ್ಸು ತಲುಪಿದ್ದ ಎತ್ತರದ ನಿಲುವಿನ, ಮರಳು ಮರಳಾದ ಚಿನ್ನದ ಬಣ್ಣದ ಕೂದಲಿನವಳು ಜನರ ನಡುವೆ ಒಬ್ಬಳೇ ನಿಂತಿದ್ದಳು. ಈ ನೂಕು ನುಗ್ಗಲಲ್ಲಿ ಹೇಗೆ ನನಗೆ ಕಂಡಳೊ ಗೊತ್ತಿಲ್ಲ. ಅವಳು ದೂರದಿಂದ ನಡೆದು ಬಂದು ಪೆನ್ಸಿಲ್ ಸ್ಕೆಚ್ ಮಾಡುತ್ತಿದ್ದ ಆರ್ಟಿಸ್ಟ್ ಒಬ್ಬನ ಸ್ಟಾಲಿಗೆ ಬಂದಳು. ನಾಲ್ಕು ಜನರ ಕುಟುಂಬವೊಂದರ ಫ್ಯಾಮಿಲಿ ಸ್ಕೆಚ್ ಮಾಡಿ ಮುಗಿಸಿದ ಆರ್ಟಿಸ್ಟ್ ಅವರಿಂದ ತನ್ನ ಫೀಸ್ ಪಡೆದು ತಕ್ಷಣವೇ ಎದ್ದು ಅವಳ ಕೈಗೆ ಮೆಲ್ಲನೆ ಮುತ್ತಿಟ್ಟು ಎದುರಿನ ಕುರ್ಚಿ ಮೇಲೆ ಕೂರಲು ಹೇಳಿದ. ಅವಳು ಬ್ಯಾಗ್ ಕೆಳಗಿಟ್ಟು, ಕೂದಲನ್ನು ಸರಿಪಡಿಸಿಕೊಂಡು, ಕುರ್ಚಿಯಲ್ಲಿ ಸಾವಕಾಶವಾಗಿ ಕೂತು ಸಿದ್ಧವಾದಳು. ನಾನು ಕಾಫಿ ಶಾಪಿನಲ್ಲಿ ಅವಳನ್ನು ನೋಡಿದಾಗೆಲ್ಲಾ ತನ್ನದೇ ಆದ ದಿವ್ಯ ಮೌನದಲ್ಲಿ ಕಳೆದು ಹೋಗಿದ್ದ ಅವಳನ್ನು ಹೀಗೆ ನೋಡುತ್ತೇನೆಂದು ಊಹಿಸಿರಲಿಲ್ಲ. ತನ್ನ ಚಿತ್ರ ಬರೆಯುತ್ತಿದ್ದ ಅವನಿಗಾಗಿ ಸಣ್ಣ ನಗೆಯೊಂದನ್ನು ಬೀರಿ ಸಹಕರಿಸಿದಳು. ಮಧ್ಯಾಹ್ನದ ಬಿಸಿಲಿಗೆ ಅಲ್ಲಲ್ಲಿ ಬಿಳಿಯಾಗಿದ್ದ ಅವಳ ಗುಂಗರು ಕೂದಲು ಹಾಗು ಸುಕ್ಕುಗಟ್ಟಿದ್ದ ಕೆನ್ನೆಯ ಚರ್ಮ ಸ್ಪಷ್ಟವಾಗಿ ಕಂಡಿತು. ಎದುರು ಕೂತು ತನ್ನ ಚಿತ್ರ ಬರೆಯಿಸಿಕೊಳ್ಳುತ್ತಿದ್ದ ಅವಳಲ್ಲಿದ್ದ ತೀವ್ರತೆಗೆ ನಾನು ಕರಗಿ ಹೋದೆ. ಅವಳನ್ನು ನೋಡುತ್ತಿದ್ದಂತೆಯೇ ಏನೋ ಉಮ್ಮಳಿಸಿದಂತಾಗಿ ಸಾರಾ ಬಹಳ ನೆನಪಾದಳು. ನನ್ನ ದೃಷ್ಟಿಯನ್ನು ಬಲವಂತವಾಗಿ ಅವಳಿಂದ ತೆಗೆದು ಅಲ್ಲಿಂದ ನಡೆದುಬಿಟ್ಟೆ. ಜಯಂಟ್ ವೀಲಿನ ಹತ್ತಿರಕ್ಕೆ ಬಂದಾಗ ಸಂಜೀವ್ ದೂರದಿಂದಲೇ ಕೈಬೀಸಿದ. ಮೂರನೆಯ ರೌಂಡಿಗೆ ಹೋಗಿದ್ದ ವಿನ್ಯಾಸ್ ಮತ್ತು ಅರುಂಧತಿ ಮೇಲಿಂದ ನಮ್ಮಿಬರಿಗೂ ಟಾಟಾ ಮಾಡುತ್ತಿದ್ದರು. ಅವರನ್ನು ನೋಡುತ್ತಲೇ ಸಂಜೀವ್ ಹೇಳಿದ. “ಒಂದು ಟಿಕೆಟ್‌ಗೆ 5 ಡಾಲರ್... ಒಂದು ರೌಂಡಿನಲ್ಲಿ ಕನಿಷ್ಠ 25 ಟಿಕೆಟ್‌ಗಳು, ಸೊ ಒಂದು ರೌಂಡಿಗೆ 125 ಡಾಲರ್ ಇನ್‌ಕಮ್. ಒಂದು ದಿನಕ್ಕೆ ಸುಮಾರು 200 ರೌಂಡ್ ಹೊಡೆಯುತ್ತಾರೆ. ಸೊ ದಿನಕ್ಕೆ 25000 ಡಾಲರ್ ಇನ್‌ಕಮ್. ಮೂರು ದಿನಗಳ ಈಸ್ಟರ್ ಫೇರ್ ಆದ್ದರಿಂದ 45,000. ಬಾಡಿಗೆ, ಲೇಬರ್ ಎಲ್ಲಾ ಹೋಗಿ ಕನಿಷ್ಠ 30,000 ಡಾಲರ್ ಪ್ರಾಫಿಟ್. ಇವರು ಮೂರು ದಿನದಲ್ಲಿ ಗಳಿಸುವಷ್ಟು ದುಡಿಯಲು ನಮಗೆ ಎಷ್ಟು ವರ್ಷ ಬೇಕು? ಜಸ್ಟ್ ಇಮ್ಯಾಜಿನ್!” ನನ್ನನ್ನು ನೋಡಿ ಹಲ್ಲುಕಿರಿದಾಗ ಸಂಜೀವ್ ವಿಕಾರವಾಗಿ ಕಂಡ. ಜಯಂಟ್ ವೀಲಿನ ತಿರುವಿನ ವೇಗ ಹೆಚ್ಚುತ್ತಿದ್ದಂತೆ ಕೂತವರು ಕಾಲು ಬಡಿಯುತ್ತಾ ಚೀರುತ್ತಿದ್ದರು. ವಿನ್ಯಾಸ್ ಮತ್ತೊಮ್ಮೆ ಮೇಲಿಂದ ಅಪ್ಪನನ್ನು ನೋಡಿ ಕೈಬೀಸಿದ.

★★★

ಶುಕ್ರವಾರ ಪ್ರಾಜೆಕ್ಟ್ ಪಾರ್ಟಿಗೆಂದು ಮೆಡೂಸಾ ಎಂಬ ಗ್ರೀಕ್ ರೆಸ್ಟೊರೆಂಟಿಗೆ ಹೋಗುವ ಕಾರ್ಯಕ್ರಮವಿತ್ತು. ಸಂಜೆ ನಾಲ್ಕಕ್ಕೆಲ್ಲಾ ಕೆಲಸ ಮುಗಿಸಿ ಪಿಟ್ ಸ್ಟ್ರೀಟಿನ ಕೊನೆಯಲ್ಲಿದ್ದ ರೆಸ್ಟೊರೆಂಟಿನ ಒಳಗೆ ಹೊಕ್ಕಿದಾಗ ಯಾವುದೋ ಗುಹೆಯೊಳಗೆ ಬಂದಹಾಗಾಯಿತು. ಸಂಜೀವ್ ಮತ್ತು ನಮ್ಮ ಟೀಮಿನ ಮ್ಯಾನೇಜರ್ ನಮ್ಮ ಕಂಪನಿ ಸದ್ಯದಲ್ಲೇ ಖರೀದಿಸಬೇಕೆಂದುಕೊಂಡಿರುವ ಎರಡು ಸಣ್ಣ ಕಂಪನಿಗಳ ಬಗ್ಗೆ ಮಾತಾಡುತ್ತಿದ್ದರು. ಊಟ ಮುಗಿಸಿ ಹೊರಬಂದಾಗ ಹೊರಗೆ ಶುಕ್ರವಾರ ಸಂಜೆಯ ರಂಗೇರಿತ್ತು. ಸಿಟಿ ಸೆಂಟರಿನಲ್ಲಿ ಕ್ಯಾಸಿನೋಗಳ ಗಿಜಿಗಿಜಿ ಹಾಗು ಲೌಂಜ್